ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ ಈಗ ನಾವು ಈ ಪ್ರಶ್ನೆ ಬಂದಾಗ ಮಾತ್ರ ಸೂಕ್ಷ್ಮವಾಗಿ ಇಲ್ಲಿ ತಿಳಿಸಿದ್ದಾರೆ. ಒಂದು ವರ್ಷದ್ದು ಅಲ್ಲ ಯಾವ ರೆಕಾರ್ಡ್ಸ್ ಬಿ.ಡಿ.ಎ.ನಲ್ಲಿ ಇಲ್ಲ. ಅಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ಬಿ.ಡಿ.ಎ. ಇದೆ. of has become private limited company ಆಗಿ ಹೋಗಿದೆ.

ಅಧ್ಯಕ್ಷರು : ಪ್ರವೈಟ್ ಲಿಮಿಟೆಡ್ ಕಂಪನಿಯಲ್ಲಿ ಲೆಕ್ಕ ಇಡುವುದಿಲ್ಲವೆ?

ಶ್ರೀ ಟಿ.ಬಿ. ಜಯಚಂದ್ರ : ಲೆಕ್ಕವೇ ಇಲ್ಲ ಅದರಲ್ಲಿ ಕೆಲವೇ ಜನರ ಕಂಪನಿಯಾಗಿ ಹೋಗಿದೆ. ಆ ಮಟ್ಟಕ್ಕೆ ಹೋಗಿದೆ.

ಅಧ್ಯಕ್ಷರು : ಪ್ರೈವೇಟ್ ಕಂಪನಿಯವರು ಅವರಲ್ಲೂ ಲೆಕ್ಕ ಇಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ಅದಕೋಸ್ಕರ ನಾನು ಹೇಳುತ್ತಿದ್ದೇನೆ. ಅವರ ಮೇಲೆ ಉಗ್ರವಾದಂಥ ಕ್ರಮವನ್ನು ನೀವು ತೆಗೆದುಕೊಳ್ಳುತ್ತಿರಾ? ಇಲ್ಲಿಯವರೆಗೂ ಯಾವ ಕ್ರಮವನ್ನು ನೀವು ತೆಗೆದುಕೊಂಡಿಲ್ಲ. ನೀವು ಉಗ್ರವಾದ ಕ್ರಮವನ್ನು ತೆಗೆದುಕೊಂಡಿದ್ದೇ ಆದರೆ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೆ ರಶೀದಿ ಬುಕ್ಸ್ ಮತ್ತೊಂದು ಇವತ್ತು ಅಫೀಷಿಯಲ್ ದಾಖಲೆಯಾಗುತ್ತದೆ. ಅವೆಲ್ಲಾ ಹೋದರೆ ಯಾರು ಕಾರಣರು. ಏಕೆ ಹೋಯಿತು ಎನ್ನತಕ್ಕಂಥ ತನಿಖೆಯಾಗಲೇಬೇಕು. ಉಗ್ರವಾದಂತಹ ತನಿಖೆ ಮಾಡಿಸುತ್ತಿದ್ದೇನೆ. ಅಕ್ಚುಯಲಿ ಅಲ್ಲಿರತಕ್ಕಂಥ ವ್ಯವಹಾರದ ಬಗ್ಗೆ ಬೇರೆ ಒಂದು ಸಮಿತಿಯನ್ನು ಕೂಡ ಮಾಡಿ ಅಡಿಷನಲ್ ಚೀಫ್ ಸೆಕ್ರೆಟರಿಯಾಗಿರತಕ್ಕಂಥ ಶ್ರೀಮಾನ್ ವೆಂಕಟೇಶ್‌ರವರು ಅವರು ಕೂಡ ನೋಡುತ್ತಿದ್ದಾರೆ. ಆ ವರದಿಗೆ ಟೈಮ್ ಎಕ್ಸ್‌ಟೆಂಡ್ ಮಾಡಿದ್ದೇವೆ. ಅವರದೂ ಕೂಡ ಬಂದಮೇಲೆ ಅಲ್ಲಿಯೂ ಕೂಡ ಕೆಲವು ವಿಚಾರಗಳು ಹೊರಗಡೆ ಬರತಕ್ಕಂಥ ಸಂದರ್ಭವಿದೆ. Actually we are waiting for that report to come out. ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ಹೇಳುತ್ತಿದ್ದೇನೆ. ತಾವು ಹೇಳಿರತಕ್ಕಂಥ ಮಾತು ಸತ್ಯ ಎನ್ನವ ಮಾತನ್ನು ಮೂಲತಃ ನಾನು ಹೇಳಿದ್ದೇನೆ. ಅದನ್ನು ಉಗ್ರವಾದ ತನಿಖೆಯನ್ನು ನಾವು ಮಾಡದೇ ಇದ್ದರೆ We can fix up the responsibility on those persons who were there during that period. ಅದರ ಬಗ್ಗೆ ನಾವು ಕಾರ್ಯಕ್ರಮ ಹಾಕಿಕೊಳ್ಳಲೇಬೇಕಾಗುತ್ತದೆ.

ಕೋಲಾರ ಜಿಲ್ಲೆಯ ಆರಕ್ಷಕ ಪಡೆ

2701 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯನ್ನು ದೇಶದ ಐದನೇ ಹೈಪರ್ ಸೆನ್ಸ್‌ಟೀವ್ ಜಿಲ್ಲೆಯನ್ನಾಗಿ ಪರಿಗಣಿಸಿದೆಯೇ?

ಆ) ಕೋಲಾರ ಜಿಲ್ಲೆ ಡಕಾಯಿತಿಗೆ ಹೆಸರಾದ ಪ್ರದೇಶವೇ?

ಇ) ಕೋಲಾರ ಜಿಲ್ಲೆಯ ಪೋಲೀಸರ ಪ್ರತಿ ದರ್ಜೆಯ ಬಲಾಬಲವೇನು?

ಈ) ಕೋಲಾರ ಜಿಲ್ಲೆಯಲ್ಲಿನ ವಿಸ್ತೀರ್ಣ, ಜನಸಂಖ್ಯೆ ಹಳ್ಳಿಗಳ ಸಂಖ್ಯೆ ಹೊರ ಪೋಲೀಸ್ ಠಾಣೆಗಳ ವ್ಯಾಪ್ತಿ ಪೋಲೀಸ್ ಠಾಣೆಗಳ ಸಂಖ್ಯೆ ಮತ್ತು ಅವುಗಳ ಹೆಸರಿನ ವಿವರವೇನು?

ಉ) ಕಾರ್ಯಭಾರಕ್ಕನುಗುಣವಾಗಿ ಕೋಲಾರ ಜಿಲ್ಲೆಯಲ್ಲಿ ಪೋಲೀಸ್ ಬಲ ಇಲ್ಲದಿರುವುದು ನಿಜವೇ?

ಊ) ಅಗತ್ಯತೆ ಹಾಗೂ ಕಾರ್ಯಭಾರಕ್ಕನುಗುಣವಾಗಿ ಸರ್ಕಾರ ತಕ್ಷಣವಲ್ಲಿ ಪೋಲೀಸ್ ಬಲವನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಋ) ಕೋಲಾರ ತಾಲ್ಲೂಕಿನ ಕ್ಯಾಲನೂರಿನಲ್ಲಿ ಆಗಾಗ್ಗೆ ಮತೀಯ ಗಲಭೆಗಳು ನಡೆಯುತ್ತಿರುವುದು ನಿಜವೇ?

ೠ) ಈ ಹಳ್ಳಿಯಲ್ಲಿ ಸರ್ಕಾರ ಹೊಸ ಪೋಲೀಸ್ ಠಾಣೆಯನ್ನು ತೆರೆಯುವುದೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಹೌದು.

ಇ)	ಸೂಪರಿಂಟೆಂಡೆಂಟ್ ಆಫ್ ಪೋಲೀಸ್	1
	ಡೆಪುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್	3
	ಸಿವಿಲ್ ಪೋಲೀಸ್ ಇನ್ಸ್‌ಪೆಕ್ಟರ್	9
	ರಿಸರ್ವ್ ಪೋಲೀಸ್ ಇನ್ಸ್‌ಪೆಕ್ಟರ್	1
	ಪೋಲೀಸ್ ಸಬ್ ಇನ್ಸ್‌ಪೆಕ್ಟರ್	30
	ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್	33
	ಸಿವಿಲ್ ಹೆಡ್ ಕಾನ್‌ಸ್ಟೇಬಲ್	164
	ಸಿವಿಲ್ ಪೋಲೀಸ್ ಕಾನ್‌ಸ್ಟೇಬಲ್	544
	ರಿಸರ್ವ್ ಸಬ್ ಇನ್ಸ್‌ಪೆಕ್ಟರ್	3
	ಅಸಿಸ್ಟೆಂಟ್ ರಿಸರ್ವ ಸಬ್ ಇನ್ಸ್‌ಪೆಕ್ಟರ್	5
	ಸಶಸ್ತ್ರ ಹೆಡ್ ಕಾನ್‌ಸ್ಟೆಬಲ್	34
	ಸಶಸ್ತ್ರ ಪೋಲೀಸ್ ಕಾನ್‌ಸ್ಟೆಬಲ್	161
ಈ)	ವಿಸ್ತೀರ್ಣ	7816
	ಜನಸಂಖ್ಯೆ	16,30,563
	ಹಳ್ಳಿಗಳು	2931
	ಹೊರ ಠಾಣೆಗಳು ಮತ್ತು ಪೋಲೀಸ್ ಠಾಣೆಗಳು (ಅನುಬಂಧ-ಅ)	-24, ಹೊರವಲಯ-18

ಉ) ಹೌದು

ಊ) ಹೌದು. ಕರ್ನಾಟಕ ರಾಜ್ಯದಲ್ಲಿ ಪೋಲೀಸ್ ಸಿಬ್ಬಂದಿ ಹೆಚ್ಚಿಸುವ ಸಮಗ್ರ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಋ) ಇಲ್ಲ, ದಿನಾಂಕ 23-8-91ರಂದು ಮಾತ್ರ ಒಂದು ಪ್ರಕರಣ ಜರುಗಿದೆ.

ೠ) ಕ್ಯಾಲನೂರಿನಲ್ಲಿ ಪೋಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆ ಈ ವರ್ಷದಲ್ಲಿ ಇರುವುದಿಲ್ಲ.

ಅನುಬಂಧ

ಪೋಲೀಸ್ ಠಾಣೆಗಳು

1) ಕೋಲಾರ (ಟಿ)
2) ಗುಲ್‌ಪೇಟ್
3) ಕೋಲಾರ (ಆರ್)
4) ಮಾಲೂರ್
5) ಮಾಸ್ತಿ
6) ವೇಮಗಲ್
7) ಚಿಂತಾಮಣಿ (ಟಿ)
8) ಚಿಂತಾಮಣಿ (ಆರ್)
9) ಮಂಚರಲಹಳ್ಳಿ
10) ಶಿಡ್ಲಘಟ್ಟ
11) ಶಿಡ್ಲಘಟ್ಟ (ಟಿ)
12) ಮುಳಬಾಗಿಲ್
13) ಮಾನಗಲಿ
14) ಶ್ರೀನಿವಾಸಪುರ
15) ರಾಯಲ್‌ಪಾಡ್
16) ಸಿ.ಡಿ.ಪುರ (ಟಿ)
17) ಸಿ.ಡಿ.ಪುರ (ರೂ)
18) ಮಂಚೇನಹಳ್ಳಿ
19) ಗೌರಿಬಿದನೂರ್
20) ಬಾಗೇಪಲ್ಲಿ
21) ಪತ್ಯಪಲ್ಯ
22) ಗುಡಿಬಂಡೆ
23) ಡಿಬುರಹಳ್ಳಿ
24) ಕೋಲಾರ ಟೌನ್ ಟ್ರಾಫಿಕ್

ಪೋಲೀಸ್ ಹೊರ ಠಾಣೆಗಳು

1) ಸುಗಟೂರು
2) ಲಕ್ಕೂರ್
3) ಟೇಕಲ್
4) ನರಸಾಪುರ
5) ಕೈವಾರ
6) ಜಂಗಮಕೋಟೆ
7) ಕ್ಯಾಲೂರು
8) ಗುಡಿಪಳ್ಳಿ
9) ಎಲ್ಡಾರು
10) ಗೌನಪಲ್ಲಿ
11) ನಂದಿ
12) ನಂದಿ ಹಿಲ್ಸ್
13) ತೊಂಡೇಬಾವಿ
14) ಹೊಸೂರು
15) ವಿದುರಶ್ವೇತ
16) ಚೆಲ್ಲೂರು
17) ಗುಲ್ಲೂರು
18) ಪೆರಸಂದ್ರ

ಶ್ರೀ ಸಿ. ಬೈರೇಗೌಡ : ಸ್ವಾಮಿ ನನ್ನ ಮೊದಲನೆಯ ಪ್ರಶ್ನೆಗೆ ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಎಂದು ಅಂಥ ಹೇಳುತ್ತಿದ್ದೀರಿ. ತಮ್ಮ ಗಮನಕ್ಕೆ ಬರದೇ ಇರಬಹುದು. ಆದರೆ ಈ ರೀತಿ ದೇಶದ ಐದನೇಯ ಹೈಪರ್ ಸೆನ್ಸಿಟಿ ಜಿಲ್ಲೆಯಾಗಿ ಇರತಕ್ಕಂಥದ್ದು ಅದು ನಿಜವೆ? ಅಥವಾ ನಿಜವಲ್ಲವೆ? ನಿಮ್ಮ ಗಮನಕ್ಕೆ ಬಾರದೇ ಇರತಕ್ಕಂಥ ವಿಚಾರ ಬೇರೆ. ಆದರೆ ವಾಸ್ತವ ಸ್ಥಿತಿ ಏನು?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಕಮ್ಯುನಲ್ ಸೆನ್ಸಿಟಿವ್ ಪ್ಲೇಸ್ ಕೋಲಾರ ಅಲ್ಲವೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದಕ್ಕೆ ಇಲ್ಲ ಎಂದು ನಾನು ಹೇಳಿದ್ದೇನೆ. ಏಕೆಂದರೆ, ಕಮ್ಯುನಲ್ ಸೆನ್ಸಿಟಿವ್ ಪ್ಲೇಸ್‌ಸನ್ನು ಐಡೆಂಟಿಫೈ ಮಾಡುವಾಗ ರಾಜ್ಯದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಮಾಡುತ್ತೇವೆ. ಅದರಲ್ಲಿ ಕೋಲಾರ

ಜಿಲ್ಲೆ ಇಲ್ಲ, ಇತ್ತೀಚೆಗೆ ಅಲ್ಲಿ ಕೆಲವು ಘಟನೆಗಳಾಗಿದೆ. ಆದರೆ ಅವು ಬೇರೆ. ಆದ್ದರಿಂದಲೇ 'ಇಲ್ಲ' ಎಂದು ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ : ಸ್ವಾಮಿ, ಕಾರ್ಯಭಾರಕ್ಕನುಗುಣವಾಗಿ ಕೋಲಾರ ಜಿಲ್ಲೆಯಲ್ಲಿ ಪೋಲೀಸ್ ಬಲ ಇಲ್ಲದಿರುವುದು ನಿಜವೇ? ಎಂದು ನಾನು ಕೇಳಿರುವುದಕ್ಕೆ ಹೌದು ಎಂದು ಉತ್ತರ ಹೇಳಿದ್ದೀರಿ. ಹಾಗಾದರೆ ಷಾರ್ಟೇಜ್ ಇರತಕ್ಕದ್ದು ಎಷ್ಟು? ಎಂದು ಹೇಳುತ್ತೀರಾ?

ಇನ್ನು ಎರಡನೆದಾಗಿ ಕ್ಯಾಲನೂರಿನಲ್ಲಿ ಕಳೆದ 2 ತಿಂಗಳಲ್ಲಿ ನಡೆದಿರುವುದನ್ನು ಹೇಳಿದ್ದೀರಿ. ಇದಕ್ಕೆ ಮುಂಚಿತವಾಗಿ 2 ವರ್ಷಗಳಿಂದ ಅಲ್ಲಿ 2-3 ಸಾರಿ ಘಟನೆಗಳು ನಡೆದಿವೆ. ಆದುದರಿಂದ ಅಲ್ಲಿ ಪೋಲೀಸ್ ಸ್ಟೇಷನ್‌ನ್ನು ಅತಿಶೀಘ್ರವಾಗಿ ತೆರೆಯಬೇಕಾದ ಅವಶ್ಯಕತೆ ಇದೆ. ಇದನ್ನು ಶೀಘ್ರವಾಗಿ ತಾವು ಮಾಡುವುದಕ್ಕೆ ಹೊರಟಿದ್ದೀರಿ. ಈಗ ರಾಜ್ಯದಲ್ಲಿ ಎಷ್ಟೋ ಪೋಲೀಸ್ ಸ್ಟೇಷನ್‌ಗಳನ್ನು ತೆರೆಯಬೇಕೆಂದು ತಾವು ಯೋಚನೆ ಮಾಡಿಕೊಂಡಿದ್ದೀರಿ. ಆ ಯೋಜನೆಯಲ್ಲಿ ಈ ಊರಿಗೂ ಒಂದು ಪೋಲೀಸ್ ಸ್ಟೇಷನ್‌ನ್ನು ಕೊಡುವುದಕ್ಕೆ ತಾವು ಆಶ್ವಾಸನೆ ಕೊಡುತ್ತೀರಾ?

ಶ್ರೀ ಧರ್ಮಸಿಂಗ್ : ಕ್ಯಾಲನೂರಿನಲ್ಲಿ 1978 ಮತ್ತು 1991ರಲ್ಲಿ ಸ್ವಲ್ಪ ಗಲಭೆಗಳು ಆಗಿವೆ. ಆದರೆ ಪೋಲೀಸ್ ಸಿಬ್ಬಂದಿ ಕಡಿಮೆ ಇದೆಯೆಂದು ತಾವು ಏನು ಪ್ರಸ್ತಾಪ ಮಾಡಿದ್ದೀರಿ. ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ. 2245 ಜನಸಂಖ್ಯೆಗೆ ಒಬ್ಬ ಸಿವಿಲ್ ಪೋಲೀಸ್ ಕಾನ್‌ಸ್ಟೇಬಲ್ ಇದ್ದಾನೆ. ಬೇರೆ ರಾಜ್ಯಗಳಲ್ಲಿ ಸ್ವಲ್ಪ ಹೆಚ್ಚಿಗೆ ಇದೆ. ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಪೋಲೀಸ್ ಕಾನ್‌ಸ್ಟೇಬಲ್‌ಗಳು ಇರಬೇಕೋ ಅಷ್ಟು ಪ್ರಮಾಣದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಲ್ಲ ಎನ್ನತಕ್ಕ ದೃಷ್ಟಿಯಿಂದ 1991-92ನೇ ಸಾಲಿನಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ನಾವು ಕೊಟ್ಟಿದ್ದೇವೆ. 1000 ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಭರ್ತಿ ಮಾಡಬೇಕೆಂದು ಈಗಾಗಲೇ ಸರ್ಕಾರ ಆದೇಶ ಹೊರಡಿಸಿದೆ. ನ್ಯಾಷನಲ್ ಪೋಲೀಸ್ ಕಮಿಷನ್ ಅಂದರೆ ಧರ್ಮವೀರ ಕಮಿಷನ್‌ನವರು ಒಂದು ರಿಪೋರ್ಟ್‌ನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಪೋಲೀಸ್‌ಸ್ಟೇಷನ್ಸ್ ಫೈರ್ ಸ್ಟೇಷನ್ಸ್ ಆರ್ಮ್ಡ್ ಪೋಲೀಸನ್ನು ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಕ್ಯಾಲನೂರಿನಲ್ಲಿ 1978ರಲ್ಲಿ ಗಲಭೆಯಾಗಿದೆ. ಅದು ನಮಾಜ್ ಮಾಡುವಾಗ ಮತ್ತು 1991ರಲ್ಲಿ ಕೂಡ ಒಂದು ಗಲಭೆಯಾಗಿದೆ. ಅಲ್ಲಿಯೂ ಕೂಡ ಪೋಲೀಸ್‌ಸ್ಟೇಷನ್‌ನ ಅವಶ್ಯಕತೆ ಇದೆ ಇನ್ನು 5 ವರ್ಷಗಳಲ್ಲಿ 55 ಪೋಲೀಸ್ ಸ್ಟೇಷನ್‌ಗಳನ್ನು ತೆರೆಯಬೇಕೆಂಬ ತೀರ್ಮಾನವನ್ನು ನಾವು ತೆಗೆದುಕೊಂಡು ಆ ಪೈಕಿ 15 ಪೋಲೀಸ್‌ಸ್ಟೇಷನ್‌ಗಳನ್ನು ಕೂಡಲೇ ತೆರೆಯುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅದರ ಜೊತೆಯಲ್ಲಿ ಇವನ್ನೂ ಕೂಡ ಪರಿಶೀಲಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಈ 15ರಲ್ಲಿ ಒಂದನ್ನು ನಮಗೆ ಕೊಡಿ ಎಂದು ನಾನು ಕೇಳುತ್ತಿದ್ದೇವೆ.

ಶ್ರೀ ಧರ್ಮಸಿಂಗ್ : ಮಾಡೋಣ.

ಶ್ರೀ ಸಿ. ಬೈರೇಗೌಡ : ಥ್ಯಾಂಕ್ಯೂ.

1989-90 ಮತ್ತು 90-91ನೇ ಸಾಲಿನಲ್ಲಿ ಬಂದಿರುವ ಅಬಕಾರಿ ಆದಾಯ.

2621 - ಶ್ರೀ ಸಿ. ಬೈರೇಗೌಡ (ಕೊರಟಗೆರೆ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?